**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿಗಳ ಪರ ಶ್ರೀ ಎ ಎನ್ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಿನಾಂಕ 06.06.1959 ರ ಅಸಲು ದಾನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಒಂದು ರುಣಭಾರ ಪತ್ರದ ದೃಡಿಕರಿಸಿದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಇನ್ನೊಂದು ರುಣಭಾರ ಅನ್ ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಒಂದು ಆಕಾರ್ ಬಂದ್ ನ, ಹಿಸ್ಸಾ ಮೊ ಜಣಿಯ ಹಕ್ಕು ದಾಖಲಾತಿ ಮತ್ತು ನಕಾಶೆಯ ದೃಡಿಕರಿಸಿದ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 4 ರಿಂದ 6 ಎಂದು ಗುರುತಿಸಲಾಯಿತು. ಎರಡು ಉತಾರುಗಳ ದೃಡಿಕರಿಸಿದ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 7 ಮತ್ತು 8 ಎಂದು ಗುರುತಿಸಲಾಯಿತು. 5 ಕೈ ಬರಹ ಪಹಣಿ ಪತ್ರಿಕೆಗಳ ದೃಡಿಕರಿಸಿದ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 9 ರಿಂದ 13 ಎಂದು ಗುರುತಿಸಲಾಯಿತು. ದಿನಾಂಕ 03.01.2009 ರ ನೊಂದಾಯಿತ ಪಾಲುವಿಭಾಗವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 14 ಎಂದು ಗುರುತಿಸಲಾಯಿತು. ಮೂರು ಪುಟಗಳ ಮುಟೇಶನ್ ರಿಜಿಸ್ಟರ್ ನ ಅನ್ ಲೈನ ಪ್ರತಿಯನ್ನು ಒಟ್ಟಾಗಿ ನಿಡಿ 15 ಎಂದು ಗುರುತಿಸಲಾಯಿತು. ಸ.ನಂ.130/6 ರ 17 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 16 ಎಂದು ಗುರುತಿಸಲಾಯಿತು. ಸನಂ.130/1 ಕ್ಕೆ ಸಂಬಂದಿಸಿದಂತೆ ಪಹಣಿ ಪತ್ರಿಕೆಯನ್ನು ನಿಡಿ 17 ಎಂದು ಗುರುತಿಸಲಾಯಿತು. ಸನಂ.130/2 ಕ್ಕೆ ಸಂಬಂದಿಸಿದ 18 ಪಹಣಿ ಪತ್ರಿಕೆಗಳನ್ನು ಒಟ್ಟಾಗಿ ನಿಡಿ 18 ಎಂದು ಗುರುತಿಸಲಾಯಿತು. ಸನಂ.130/3 ಕ್ಕೆ ಸಂಬಂದಿಸಿದಂತೆ 18 ಪಹಣಿ ಪತ್ರಿಕೆಗಳನ್ನು ನಿಡಿ 19 ಎಂದು ಗುರುತಿಸಲಾಯಿತು. ಸನಂ.130/4 ಕ್ಕೆ ಸಂಬಂದಿಸಿದ 18 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 20 ಎಂದು ಗುರುತಿಸಲಾಯಿತು.

ಸನಂ.130/5 ಕ್ಕೆ ಸಂಬಂದಿಸಿದ 18 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 21 ಎಂದು ಗುರುತಿಸಲಾಯಿತು. ರಾಮದಾಸಪ್ಪ ಮತ್ತು ಲಕ್ಷ್ಮಿದೇವಿ ರವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ 22 ಮತ್ತು 23 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ